ಒಂದು ವಾಕ್ಯದಲ್ಲಿ ಉತ್ತರಿಸಿರಿ.

1.ಪರ್ವತ ಹಿಮ ಯಾವ ಎತ್ತರಕ್ಕೆ ಎದ್ದು ನಿಂತಿದೆ?

ಉತ್ತರ– .ಪರ್ವತ ಹಿಮ ಆಕಾಶದ ಎತ್ತರಕ್ಕೆ ಎದ್ದು ನಿಂತಿದೆ.

2. ಪೆರ್ದೆರೆಗಳು ಯಾವುದಕ್ಕೆ ಮುತ್ತು ನೀಡುತ್ತಿವೆ?

ಉತ್ತರ– ಪೆರ್ದೆರೆಗಳು ಕರಾವಳಿಗೆ ಮುತ್ತುನೀಡುತ್ತೀವೆ.

3. ಹಸಿರು ದೀಪವನ್ನು ಎಲ್ಲಿ ಹಚ್ಚಲಾಗಿದೆ?

ಉತ್ತರ– ಹಸಿರು ದೀಪವನ್ನು ಬಯಲ ತುಂಬಾ ಹಚ್ಚಲಾಗಿದೆ.

4. ಯಂತ್ರಘೋಷ ಏಳುತ್ತಿರುವ ಬಗೆ ಹೇಗೆ?

ಉತ್ತರ– ನೀಲಿಯಲ್ಲಿ ಹೊಗೆಯ ಚೆಲ್ಲಿ ಯಂತ್ರಘೋಷ ಏಳುತ್ತಿದೆ.

5. ನಮ್ಮ ಧ್ವಜವನ್ನು ಎತ್ತಿ ಹಿಡಿದವರು ಯಾರು?

ಉತ್ತರ– ನಮ್ಮ ಧ್ವಜವನ್ನು ಎತ್ತಿ ಹಿಡಿದಿರುವವರು ನಮ್ಮ ಸೈನಿಕರು.

6, ನಮ್ಮ ಪಯಣ ಎತ್ತ ಸಾಗಿದೆ?

ಉತ್ತರ– ನಮ್ಮ ಪಯಣ ಗುರಿಯ ಕಡೆಗೆ ಸಾಗಿದೆ.

ಪ್ರಶ್ನೆ ಆ ಕೊಟ್ಟಿರುವ ಪ್ರಶ್ನೆಗಳಿಗೆ ಮೂರು?ನಾಲ್ಕು ವಾಕ್ಯದಲ್ಲಿ ಉತ್ತರಿಸಿರಿ.

**1. ಕಣ್ಣು ಬೇರೆಯಾದರೂ ನೋಟ ಒಂದಾಗುವ ಸಂದರ್ಭವನ್ನು ತಿಳಿಸಿ?**

**ಉತ್ತರ–** ಕವಿಯು ಭಾರತದ ಪ್ರಾಕೃತಿಕ ಸೌಂದರ್ಯವನ್ನು ಕುರಿತು ಹೇಳುತ್ತಾ, ಭಾರತದ ಉತ್ತರಭಾಗದ ತುದಿಯ ಹಿಮಾಲಯ ಪರ್ವತ ಶ್ರೇಣಿಗಳು ಆಕಾಶದೆತ್ತರ ನಿಂತಿದೆ. ಭಾರತದ ಪೂರ್ವ ಮತ್ತು ಪಶ್ಚಿಮ ಕರಾವಳಿ ತೀರ ಪ್ರದೇಶದಲ್ಲಿ ಕರಾವಳಿಗೆ ಮುತ್ತನೀಡುವ ದೊಡ್ಡ ದೊಡ್ಡ ಅಲೆಗಳ ಗಾಯನವಿದೆ ಭಾರತದ ಬಯಲು ಪ್ರದೇಶದಲ್ಲಿ ಸದಾಕಾಲ ಹರಿಯುವ ನದಿಗಳು ಕೃಷಿಗೆ ಸಹಾಯಕವಾಗಿ ಹಸಿರು ದೀಪದಂತೆ ತೋರುತ್ತಿದೆ. ಆಕಾಶದ ನೀಲಿಯಲ್ಲಿಹೊಗೆಯನ್ನು ಚೆಲ್ಲುತ್ತಾ ನಿಂತಿರುವ ಬೃಹತ್ ಕೈಗಾರಿಕೆಗಳಿದ್ದು ನಮ್ಮ ದೇಶದ ವಿವಿಧ

ಪ್ರದೇಶಗಳಲ್ಲಿ ವಸಿಸಿತ್ತಿರುವ ಜನರ ಕಣ್ಣುಗಳು ಬೇರೆಯಾದರೂ ನೋಟ ಒಂದೇ ಎಂದು ಹೇಳಿದ್ದಾರೆ.

2. 'ಭಾಷೆ ಬೇರೆಯಾದರೂ ಭಾವ ಒಂದು' –ಸಮರ್ಥಿಸಿ?

ಉತ್ತರ– ನಮ್ಮ ದೇಶವನ್ನು ಶತ್ರುಗಳ ದಾಳಿಯಿಂದ ಕಾಪಾಡಲು ಗಡಿಭಾಗಗಳಲ್ಲಿ ಭೂಸೇನೆ, ಆಕಾಸದಲ್ಲಿ ವಾಯುಸೇನೆ, ಕಡಲಿನಲ್ಲಿ ನೌಕಾಸೇನೆಯ ಸೈನಿಕರು  ಭಾರತದ ದೇಶದ ತ್ರಿವರ್ಣ ಧ್ವಜವನ್ನು ಹಿಡಿದು ನಿಂತಿದ್ದಾರೆ. ಈ ಧ್ವಜದ ನೆರಳಿನಲ್ಲಿ ವಿವಿಧ ಧರ್ಮ,ಭಾಷೆಗಳಜನರು ಜೀವಿಸುತ್ತಿದ್ದಾರೆ. ನಮ್ಮೆಲ್ಲರ  ಭಾಷೆಗಳು ಬೇರೆಯಾದರೂ, ನಾವೆಲ್ಲರೂ ಭಾರತೀಯುರು ಎಂಬ ಭಾವನೆ ನಮ್ಮಲ್ಲಿದೆ ಎಂದು ಕವಿ ಹೇಳಿದ್ದಾರೆ.

**3.ಪ್ರಶ್ನೆ ಇ ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು?ಹತ್ತು ವಾಕ್ಯದಲ್ಲಿ ಉತ್ತರಿಸಿರಿ.**

**1. ನಾವು ಭಾರತೀಯರು ಎಂಬ ಅಭಿಮಾನದಿಂದ ಮಿಡಿಯುವ ಸನ್ನಿವೇಶವನ್ನು ವಿವರಿಸಿ?**

ಉತ್ತರ– 'ಭಾರತೀಯತೆ ಕವನದಲ್ಲಿ ಕವಿ ಭಾರತೀಯರ ಏಕತೆಯನ್ನು ಕುರಿತು ಅಭಿಮಾನದಿಂದ ಹೇಳಿದ್ದಾರೆ. ಭಾರತದ ದೇಶದ ಆಕಾಶದೆತ್ತರದ ಪರ್ವತ ಪ್ರದೇಶಗಳಲ್ಲಿ ಕರಾವಳಿಯ ತೀರಗಳಲ್ಲಿ, ಬಯಲ ಪ್ರದೇಶಗಳಲ್ಲಿ ಕೋಟ್ಯಾಂತರ ಜನ ಭಾರತೀಯರು ವಾಸಿಸುತ್ತಿದ್ದು ಅವರೆಲ್ಲರ ಕಣ್ಣುಗಳು ಬೇರೆಯಾದರೂ ನೋಟವು ಒಂದೇ ಆಗಿರುತ್ತದೆ. ನಮ್ಮ ನಾಡಿನಲ್ಲಿ ಹಲವಾರು ಗಡಿ ಪ್ರದೇಶಗಳು ಎತ್ತರವಾದ ಬಾನು ಕಡಲುಗಳಿವೆ ಯೋಧರು ನಮ್ಮ ಧ್ವಜವನ್ನು ಅಲ್ಲಿ ಹಾರಿಸುತ್ತಿದ್ದಾರೆ. ನಮ್ಮ ತಾಯಿ ಭಾರತಾಂಬೆಯು ನಮ್ಮೆಲ್ಲರನ್ನು ಒಂದೇ ತೊಟ್ಟಿಲಿನಲ್ಲಿ ಪೊರೆಯುತ್ತಿದ್ದಾಳೆ. ಭಾರತೀಯರ ಭಾಷೆಗಳು ಬೇರೆ

ಬೇರೆಯಾದರೂ ಭಾವನೆಗಳು ಒಂದೇ ಆಗಿದೆ. ಹಾಗೂ ತಾಯ್ನಾಡಿಗಾಗಿ ಪ್ರಾಣ ತ್ಯಾಗ ಮಾಡಿರುವ ಅನೇಕ ಹುತಾತ್ಮರು, ನಮ್ಮ ದೇಶದಲ್ಲಿ ಇದ್ದಾರೆ. ನಾವೂ

ಕಷ್ಟದಲ್ಲಿದ್ದರೂ ಪರರ ಕಷ್ಟಗಳಿಗೆ ಮಿಡಿಯುವ ಸಂಸ್ಕೃತಿ ನಮ್ಮದಾಗಿದೆ. ಬಿರುಗಾಳಿಯೆಂಬ ಕಷ್ಟದಲ್ಲಿಯೂ ನಾವೂ ನಮ್ಮ ಗುರಿಯ ಬೆಳಕಿನೆಡೆಗೆ ಸಾಗುತ್ತಿದ್ದೇವೆ. ನಾವು ಯಾವುದೇ

ರಾಜ್ಯದಲ್ಲಿದ್ದರೂ ನಾವು ಒಂದೇ ನಾವೆಲ್ಲರೂ ಭಾರತೀಯರು ಎಂದು ಕವಿ ಅಭಿಮಾನದಿಂದ ಹೇಳಿದ್ದಾರೆ.

**ಪ್ರಶ್ನೆ ಈ ಸಂದರ್ಭಾನುಸಾರ ವಿವರಿಸಿ.**

1. **"ಕಣ್ಣು ಬೇರೆ, ನೋಟವೊಂದು"**

ಆಯ್ಕೆ – ಪ್ರಸ್ತುತ ವಾಕ್ಯವನ್ನು ಕೆ.ಎಸ್. ನರಸಿಂಹಸ್ವಾಮಿ ಅವರ ನವಪಲ್ಲವ ಕವನ ಸಂಕಲನದಿಂದ ಆಯ್ದ 'ಭಾರತೀಯತೆ' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ– ಭಾರತ ದೇಶದ ಪರ್ವತದ ತಪ್ಪಲು ಪ್ರದೇಶಗಳಲ್ಲಿ , ಕರಾವಳಿ ಪ್ರದೇಶಗಳಲ್ಲಿ, ಹಸಿರಾದ ಬಯಲು ನಾಡಿನಲ್ಲಿ, ನದಿ ತೀರಗಳಲ್ಲಿ, ನೀಲಿ ಹೊಗೆ ಕಾರುವ ಯಂತ್ರಘೋಷಗಳ ಬಳಿಯಲ್ಲಿ, ಈ ಎಲ್ಲಾ ಕಡೆ ವಾಸಿಸುವ ಕೋಟ್ಯಾಂತರ ಜನರ ಕಣ್ಣು ಬೇರೆ–ಬೇರೆಯವರ ನೋಟವು ಒಂದೇ ಆಗಿದೆ. ಎಂದು ಕವಿ ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ – ನಾವೆಲ್ಲರೂ ದೇಶದ ವಿವಿಧ ಪ್ರದೇಶಗಳಲ್ಲಿ ವಾಸಿಸುತ್ತಿದ್ದರೂ ನಾವೆಲ್ಲರೂ ಒಂದೇ ಎಂಬ ಐಕ್ಯತಾ ಭಾವವೇ ಇಲ್ಲಿರುವ ಸ್ವಾರಸ್ಯವಾಗಿದೆ.

2."ಭಾಷೆ ಬೇರೆ ಭಾವವೊಂದೆ"

ಆಯ್ಕೆ – ಪ್ರಸ್ತುತ ವಾಕ್ಯವನ್ನು ಕೆ.ಎಸ್. ನರಸಿಂಹಸ್ವಾಮಿ ಅವರ ನವಪಲ್ಲವ ಕವನ ಸಂಕಲನದಿಂದ ಆಯ್ದ 'ಭಾರತೀಯತೆ' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ – ನಮ್ಮ ನಾಡಿನಲ್ಲಿ ಹಲವಾರು ಗಡಿ ಪ್ರದೇಶಗಳಿದ್ದು ವಿಸ್ತಾರವಾದ ಬಾನು,ಕಡಲುಗಳಿವೆ. ನಮ್ಮ ಯೋಧರು ನಮ್ಮ ನಾಡಿನ ತ್ರಿವರ್ಣ ಧ್ವಜವನ್ನು ಎತ್ತಿ ಹಿಡಿದಿದ್ದಾರೆ. ನಾವೆಲ್ಲರೂ ವಾಸಿಸುತ್ತಿರುವ ನಮ್ಮ ದೇಶವಾದ ಭಾರತವು ನಮ್ಮೆಲ್ಲರನ್ನೂ ಪೊರೆದ ತೊಟ್ಟಿಲಾಗಿದೆ. ಯುಗ– ಯುಗಗಳಲ್ಲಿಯೂ ನಮ್ಮ ಕೊರಳಿನಿಂದ ಐಕ್ಯತೆಯ ಧ್ವನಿ ಮೂಡಿ ಬಂದಿದೆ. ಆದ್ದರಿಂದ ನಮ್ಮ ಭಾಷೆಗಳು ಬೇರೆ ಬೇರೆಯಾದರೂ ಭಾವವು ಒಂದೇ ಎಂದು ಕವಿ ಹೇಳುವ ಸಂದರ್ಭದಲ್ಲಿ ಈ ವಾಕ್ಯವು ಬಂದಿದೆ.

**ಸ್ವಾರಸ್ಯ** – ನಮ್ಮ ನಾಡು ವಿವಧತೆಯಲ್ಲಿ ಏಕತೆಯನ್ನು ಸಾಧಿಸಿರುವ ನಾಡಾಗಿದೆ ಎಂಬುದೇ ಇಲ್ಲಿನ ಸ್ವಾರಸ್ಯವಾಗಿದೆ.

**3 " ಎಲ್ಲೇ ಇರಲಿ, ನಾವು ಒಂದು "**

ಆಯ್ಕೆ – ಪ್ರಸ್ತುತ ವಾಕ್ಯವನ್ನು ಕೆ.ಎಸ್. ನರಸಿಂಹಸ್ವಾಮಿ ಅವರ ನವಪಲ್ಲವ ಕವನ ಸಂಕಲನದಿಂದ ಆಯ್ದ 'ಭಾರತೀಯತೆ' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ – ನಮ್ಮಲ್ಲಿ ನಾಡಿಗಾಗಿ ಪ್ರಾಣ ತ್ಯಾಗ ಮಾಡಿರುವ ಅನೇಕ ಹುತಾತ್ಮರಿದ್ದಾರೆ. ನಮ್ಮ ಕಷ್ಟದಲ್ಲಿಯೂ ಪರರಿಗೆ ಮಿಡಿಯುವ ಸಂಸ್ಕೃತಿ ನಮ್ಮದು ಬಿರುಗಾಳಿಯಂತಹ ಕಷ್ಟದಲ್ಲೂ ಕಷ್ಟಸಹಿಸಿ ನಮ್ಮ ಗುರಿಯೆಡೆಗೆ ಸಾಗುವ ಧೀರ ಪ್ರಯಾಣದಲ್ಲಿ ನಾವಿದ್ದೇವೆ. ನಾವು ಯಾವುದೇ ರಾಜ್ಯದಲ್ಲಿದ್ದರು ನಾವೆಲ್ಲರೂ ಒಂದೇ ಎಂದು ಕವಿ ಹೇಳುವ ಸಂದರ್ಭದಲ್ಲಿ ಈ ವಾಕ್ಯವು ಬಂದಿದೆ.

ಸ್ವಾರಸ್ಯ – ನಾವು ದೇಶದ ಯಾವುದೇ ಭಾಗದಲ್ಲಿ ವಾಸಿಸಿದರೂ ನಾವು ಭಾರತೀಯರೆಂಬ ಅರಿವು ಎಲ್ಲರಿಗೂ ಇರಬೇಕೆಂಬುದೇ ಇಲ್ಲಿನ ಸ್ವಾರಸ್ಯವಾಗಿದೆ.

ಪ್ರಶ್ನೆ ಉ ಬಿಟ್ಟಸ್ಥಳ ತುಂಬಿರಿ.

1. ಯಂತ್ರಘೋಷ ವೇಳುವಲ್ಲಿ
2. ಒಂದೇ ನೆಲದ ತೊಟ್ಟಿಲಲ್ಲಿ
3. ನಮ್ಮ ಯುಗದ ದನಿಗಳಾಗಿ ಮೂಡಿದೆಲ್ಲ ಹಾಡಿನಲ್ಲಿ
4. ಎಲ್ಲೇ ಇರಲಿ ನಾವು ಒಂದು
5. ನಡೆವ ಧೀರ ಪುಣದಲ್ಲಿ

ಪ್ರಶ್ನೆಊ ತತ್ಸಮ–ತದ್ಭವ

1. ಆಕಾಶ–ಆಗಸ
2. ಮೌನ– ಮೋನ
3. ಗಾನ– ಗಾಯನ

4. ಯಂತ್ರ– ಜಂತ್ರ

5. ಯೋಧ– ಜೋಧ